ಅವನೆದುರು ಹೇಳಿ ಅವನಿಂದ ಆ ಘಟನೆ, ಯೋಜನೆಗಳ ಸಾಧಕಬಾಧಕಗಳನ್ನು ಕೇಳಿ ತಿಳಿಯುವಳು. ಅವುಗಳ ಸಾಧ್ಯಾಸಾಧ್ಯತೆಗಳ ಬಗ್ಗೆ ಅವನ ಬಾಯಿಂದ ಬರುವ ಶಬ್ದ ಅವಳಿಗೆ ತುಂಬ ಮಹತ್ವದ್ದಾಗಿರುತ್ತಿದ್ದವು. ಹಿಂದೆ ಅವನು ಹೇಳಿದ್ದು ಎಷ್ಟೆಲ್ಲ ಖರೆಯಾಗಿವೆ!

‘ದೇವಪ್ಪ ಇದ್ದೂರಲ್ಲಿ ಏಳಿಗೆ ಕಾಣಲಾರ, ಪರವೂರಲ್ಲಿ ಅವನನ್ನು ಹಿಡಿಯುವವರೆ ಇಲ್ಲ’ ಎಂದು ಗಿಳಿ ಗಿರಿಯಪ್ಪ ಹೇಳಿದ್ದರಿಂದಲೇ ದೇವಪ್ಪನ ಚಾದಂಗಡಿ ಮಲ್ಲೂರಲ್ಲಿ ಅಷ್ಟೊಂದು ಉತ್ಕರ್ಷ ಕಂಡಿದ್ದಲ್ಲವೆ? ಮಲ್ಲೂರಿನ ಕೆಲವೇ ಕೆಲವು ಶ್ರೀಮಂತ ವ್ಯಕ್ತಿಗಳಲ್ಲಿ ಈಗ ತನ್ನ ಮಗನೂ ಒಬ್ಬನಲ್ಲವೆ? ಊರಲ್ಲಿಯ ತಮ್ಮ ಭಾವ, ದೇವಪ್ಪನ ದೊಡ್ಡಪ್ಪ, ತಮ್ಮ ಹೊಲವನ್ನು ನುಂಗಿದ್ದ. ಇವರು ಮಾತಾಡಿಸಿದರೂ ಮಾತಾಡುತ್ತಿರಲಿಲ್ಲ. ಕಾಲಕಸ ಮಾಡಿದ್ದ. ‘ಸುಮ್ಮನಿರಿ, ಒಂದು ಅನ್ನಾಕ ಹೋಗಬೇಡಿರಿ, ಎರಡು ಅನ್ನಲಿಕ್ಕೆ ಹೋಗಬೇಡಿರಿ, ನಮ್ಮ ಗಿಳಿ ಹೇಳತೈತಿ, ನಿಮ್ಮನ್ನು ಅವಮಾನ ಮಾಡಿದ ವ್ಯಕ್ತಿ ಪಶ್ಚಾತ್ತಾಪಪಟ್ಟರೂ ಇಲ್ಲ, ಮರುಗಿದರೂ ಇಲ್ಲ. ಗಾಲಿ ಉಳ್ಳತೈತಿ, ತಾಯಿ, ಗಾಲಿ ಉಳ್ಳತೈತಿ’ ಎಂದು ಗುಟ್ಟಿನಲ್ಲಿ ಹೇಳಿದ್ದು ಸತ್ಯವಾಗಿ ನಡೆದೇಹೋಯಿತು. ದೇವಪ್ಪನ ದೊಡ್ಡಪ್ಪ ಅಪಘಾತದಲ್ಲಿ ಮಡಿದುಹೋದನಲ್ಲ? ತಮ್ಮ ಆಸ್ತಿ ನುಂಗಿದವರನ್ನು ದೇವರು ನುಂಗಿದ. ಶಿವವ್ವನಿಗೆ ಆಗಾಗ ಕಾಡುವ ವಿಚಾರವೆಂದರೆ ತನ್ನ ಮಗನ ಮದುವೆ ಯಾವಾಗ ಆಗುವುದೆಂಬುದು. ಗಿಳಿಶಾಸ್ತ್ರದವನು ಎಲ್ಲ ಹೇಳುತ್ತಾನೆ, ಇದನ್ನು ಬಿಟ್ಟು. ಅದಕ್ಕಾಗಿ ಈ ಸಲ ಅವನು ಇದನ್ನು ಹೇಳದೆ ಹೋಗುವಂತಿಲ್ಲವೆಂದು ಕರಾರು ಹಾಕಿದ್ದಾಳೆ. ಅವನು ಕೇಳುವುದಕ್ಕಿಂತ ಮೊದಲೇ ಹನ್ನೊಂದು ರೂಪಾಯಿಗಳನ್ನು ಇಟ್ಟಳು. ಐದು ರೂಪಾಯಿ ಕೊಡಲು ಹಿಂಜರಿಯುವ ಮುದುಕಿ ಇಷ್ಟು ದೊಡ್ಡ ಮೊತ್ತ ಕೊಟ್ಟಿದ್ದಕ್ಕೆ ಗಿರಿಯಪ್ಪನ ಮುಖ ಮೊರದಗಲವಾಯಿತು. ಅವನ ಮೂಗು ಮತ್ತಷ್ಟು ಚೂಪಾಯಿತು. ಗಿರಿಯಪ್ಪ ಹೇಳುವುದಕ್ಕಿಂತ ಮೊದಲೆ ಗಿಳಿ ಬಂದು ಹರವಿದ್ದ ಎಲೆಗಳಲ್ಲಿ ಒಂದನ್ನು ಆರಿಸಿ ತನ್ನ ಯಜಮಾನನ ಕೈಗೆ ಕೊಟ್ಟಿತು. ಅದರೊಳಗಿದ್ದ ಚೀಟಿ ತೆಗೆದು ಓದಿದ ಮೇಲೆ ಆತ ತುಸು ಪ್ರಸನ್ನಚಿತ್ತನಾದನೆಂದು ಕಾಣುತ್ತದೆ:

‘ದೇವಪ್ಪನ ಜಾತಕ, ದೇವಪ್ಪನ ಶಾಸ್ತ್ರ, ದೇವಪ್ಪನ ಆಲೋಚನೆ, ದೇವಪ್ಪನ ಹೆಸರುಬಲ, ನಿಮಗೆ ಪರಮೇಶ್ವರ ಬಂದಿದಾನೆ. ಏನು ನಿಮ್ಮ ಹೆಸರು? ಹಾಂ, ದೇವಪ್ಪ, ನಿಮಗೊಂದು ಅಪ್ಪ ಅಮ್ಮ, ಅಣ್ಣತಮ್ಮ, ಕಾಕಾ ದೊಡ್ಡಪ್ಪ ಅಂತ ಅವರು ಗಳಿಸಿದ ಆಸ್ತಿ ನಿಮಗೆ ಬೇಕಾಗಿಲ್ಲ. ನಿಮಗೆ ಸ್ವಂತ ಆಲೋಚನೆ ಇದೆ. ಸ್ವಂತ ದುಡಿಬೇಕು, ಸ್ವಂತ ಗಳಿಸಬೇಕು ಅನ್ನೋ ಆಲೋಚನೆ ನಿಮ್ಮದು ಇದೆ. ನಿಮ್ಮ ಜಾತಕ ನೋಡಿ ಹೇಳಬೇಕಂದ್ರೆ, ನಿಮ್ಮ ಹೆಸರ ಮೇಲೆ ಹೇಳಬೇಕಂದ್ರೆ ಸ್ವಂತ ಬುದ್ಧಿ, ಸ್ವಂತ ಆಲೋಚನೆ ಇದೆ. ನಿಮ್ಮ ಹೆಸರ ಮ್ಯಾಲ ಹೇಳಬೇಕಂದ್ರೆ ದೇವಪ್ಪ ನೀವು ಕರಿದಾರ, ಕರಿ ಬಟ್ಟೆ ಎಂದೂ ಹಾಕ್ಕೋಬಾರದು. ನಿಮಗೆ



## ಕಳೆದ ಸಂಚಿಕೆಯಲ್ಲಿ

ಮಾಯಕ್ಕನಿಗೆ ಚಿಕ್ಕವಯಸ್ಸಿನಲ್ಲೇ ಮುತ್ತಪ್ಪನ ಜೊತೆಗೆ ಮದುವೆ ಮಾಡಿದಾಗ ಅವಳಿಗೆ ಗಂಡನ ಜೊತೆ ಹೊಂದಾಣಿಕೆ ಆಗುವುದಿಲ್ಲ. ಗಂಡನೊಂದಿಗೆ ಜಗಳಾಡುತ್ತಾ ಇರುವ ಬದಲಿಗೆ ಮನೆಯಿಂದ ಹೊರಟು ಹೋಗುವುದೇ ಮೇಲು ಎಂಬ ತೀರ್ಮಾನಕ್ಕೆ ಬರುತ್ತಾಳೆ. ಈಕೆಯನ್ನು ಬಿಡುವುದೇ ಲೇಸು ಎಂದು ಮುತ್ತಪ್ಪನ ಹೆತ್ತವರೂ ನಿರ್ಧರಿಸುತ್ತಾರೆ. ಮಾಯಕ್ಕನ ಮನೆಯವರನ್ನು ಕರೆಸಿ ಮದುವೆ ರದ್ದಾಗಿದೆ ಎಂದು ಬರೆಸಿಕೊಳ್ಳುತ್ತಾರೆ. ಮುತ್ತಪ್ಪನನ್ನು ತೊರೆದ ಬಳಿಕ ಮಾಯವ್ವ ದೇವಪ್ಪನನ್ನು ಮದುವೆಯಾಗುತ್ತಾಳೆ. ದೇವಪ್ಪ ಮಾಯವ್ವಳನ್ನು ಕರೆದುಕೊಂಡು ಮಲ್ಲೂರಿಗೆ ಹೋಗುತ್ತಾರೆ. ಮುತ್ತಪ್ಪನನ್ನು ಬಿಟ್ಟು ದೇವಪ್ಪನನ್ನು ಕಟ್ಟಿಕೊಂಡ ಮಾಯಕ್ಕಳ ಬಗ್ಗೆ ಮಂದಿ ನೂರೆಂಟು ಮಾತಾಡಲಾರಂಭಿಸುತ್ತಾರೆ.

ವಿವಾಹಯೋಗ ಇದ್ದಿರಲೆ ಇಲ್ಲ. ಆದರೆ ಶನಿಕಾಟಕ್ಕೆ ಸಮನಾಗಿ ನಿಮಗೆ ಗುರುಬಲ ಕೂಡಿ ಬಂದಿರುವುದರಿಂದ ಆ ಸವಾಲು ದೂರಾಗಿ ವಿವಾಹಯೋಗ ಬಂದುಬಿಟ್ಟಿದೆ. ತಾಯೆ, ನೋಡಿ, ನಾನು ಈ ಸಲ ನಿಮ್ಮ ಮನೆಗೆ ಬಂದಕೂಡಲೆ ಶನಿಕಾಟ ತಪ್ಪಿ ಗುರುಬಲ ಹುಡುಕಿಕೊಂಡು ಬಂದಿದೆ.’

‘ಯಪ್ಪಾ ಗಿರಿಯಪ್ಪ, ಎಷ್ಟೊಂದು ಒಳ್ಳೆಯ ಸುದ್ದಿ ಹೇಳಿದೆಯಪ್ಪ? ನಿನಗೆ ಪುಣ್ಯದ ಗಂಟೇ ಸಿಗಲಿ.’ ಮೇಲೆ ಮುಖ ಮಾಡಿ ಮುಗಿಲಿಗೆ ಕೈಮುಗಿದಳು. ‘ತಾಯಿ, ಇನ್ನೊಂದು ವಿಚಾರ. ನಿನ್ನ ಮಗ ದೇವಪ್ಪನಿಗೆ ಮದುವೆಯಾಗುತ್ತದೆ. ಎರಡು ಮಾತಿಲ್ಲ. ಆದರೆ ಅದಕ್ಕೆ ಮುಂದೆ ಕಂಟಕ ಇದೆ. ಒಂದಲ್ಲ, ಎರಡು ಸ್ತ್ರೀ ಕಂಟಕಗಳು ಇವೆ. ಸ್ತ್ರೀ ಕಂಟಕ ಅಂದರೆ ಅವರು ಇವನಿಗೆ ಜೀವಹಾನಿ ಮಾಡೋದಿಲ್ಲ. ಆದರೆ ಇವನೆ ಅವರ ಬೆನ್ನು ಹತ್ತಬಹುದು. ಜಾಸ್ತಿ ಸಿಟ್ಟು ಒಳ್ಳೇದಲ್ಲ ದೇವಪ್ಪ. ಈ ಕಂಟಕಗಳಿಂದ ನಿಮ್ಮ ಮಗ ತಪ್ಪಿಸಿಕೊಳ್ಳಬೇಕು. ತಾಯಿ, ಮಗ ಕೋರ್ಟ್ ಕಚೇರಿ ಅಡ್ಡಾಡುವುದಿತ್ತು, ಆದರೆ ನಾನು ಹೇಳ್ತಾ ಇದೇನೆ. ಅದರ ಬೆನ್ನು ಹತ್ತಬ್ಯಾಡಿ. ಯಾವುದೇ ಕಾರಣಕ್ಕೂ ಪೋಲೀಸ್ ಸ್ಟೇಷನ್ನಿನ ಮೆಟ್ಟಿಲು ಹತ್ತೋದಾಗಲಿ, ಕೋರ್ಟ್ ಕಚೇರಿಯ ಬಾಗಿಲು ಬಡಿಯೋದಾಗ್ಲಿ ಮಾಡಬಾರದು. ಮಾಡಿದರೆ ದೇವಪ್ಪ ಹಿಂಡಿದ ಅರಿವೆಯಂಗ ಆಗಿ ಮುದುಡಿಯಾಗ್ತಾನ ತಾಯೆ. ತಾಯೆ ನಿಮಗೆ ಇನ್ನೂ ಹೇಳಬೇಕೆಂದ್ರೆ ಜನರ ಕಣ್ಣು ಬಾಳ ತಾಯಿ ನಿಮ್ಮ ಮ್ಯಾಲೆ. ಈಗ ನೋಡಬೇಕಂದ್ರ ದೇವಪ್ಪ, ನಿಮ್ಮ ತಾಯಿ ಮತ್ತು ನೀವು ಕಳೆದ ಮೂರು ತಿಂಗಳಿಂದ ರೆಪ್ಪಿಗೆ ರೆಪ್ಪಿ ಹಚ್ಚಿ ನಿದ್ದಿ ಮಾಡಿಲ್ಲ. ಬಾಳ ತಡಕೊಂಡೀರಿ. ಒಳ್ಳೆಯದಾಗ್ಲಿ ಅಂತ ಅನಕೋತಾ ಮನೆದೇವರನ್ನು ನೆನೆಸಿ ಒಂದು ಕಾರ್ಡು ತೆಗೀರಿ’.

ದೇವಪ್ಪ ಮನೆ ದೇವರನ್ನು ನೆನೆಸಿ ಭಯ ಭಕ್ತಿಯಿಂದ ಒಂದು ಕಾರ್ಡನ್ನು ಆರಿಸಿ ಗಿರಿಯಪ್ಪನ ಕೈಗಿತ್ತು ಅವನಿಗೂ ಕೈ ಮುಗಿದ. ಗಿರಿಯಪ್ಪ ಕೆಳಗೆ ಹರವಿಕೊಂಡು ಕುಳಿತಿದ್ದ ಕಾರ್ಡುಗಳ ಬಣ್ಣ ಕೂಡ ಹಸಿರಿತ್ತು. ಎಷ್ಟೋ ವರ್ಷಗಳ ಹಸಿರು ಬಣ್ಣ ಈಗ ಮಾಸಿ ಹೋಗಿ, ಅದು ಹಸಿರೋ, ಮತ್ತೊಂದೋ ತಿಳಿಯುತ್ತಿರಲಿಲ್ಲ. ಸುಮಾರು ಐವತ್ತು ಸಣ್ಣ ಸಣ್ಣ ಕಾರ್ಡುಗಳಿಂತಿರುವ ಸಣ್ಣ ಸಣ್ಣ ಪಾಕೀಟುಗಳು. ಅದರೊಳಗೆ ರಟ್ಟಿನಂತಹ ಒಂದು ಸಣ್ಣ ಕಾರ್ಡು. ಅದರೊಳಗೆ ನಕ್ಷತ್ರದ ಗುರುತು ಹಾಕಿ ಒಂದರ ಕೆಳಗೆ ವ್ಯಕ್ತಿಯೊಬ್ಬರ ಭವಿಷ್ಯವನ್ನು ತಿಳಿಸುವಂತಹ ಶೀರ್ಷಿಕೆಗಳು. ಉದ್ಯೋಗ, ಮನೆ ಸೌಖ್ಯ, ಕಲಹ, ಮೋಸ, ನಂಬಿಕೆ ದ್ರೋಹ, ವಿವಾಹಯೋಗ ಇತ್ಯಾದಿಗಳು ಬರೆಯಲ್ಪಟ್ಟಿದ್ದವು. ಭವಿಷ್ಯದ ಬಗ್ಗೆ ನಾಲ್ಕೈದು ಅಂಶಗಳನ್ನು ತಿಳಿಸುವ ಒಂದು ಸಣ್ಣ ಕಾರ್ಡು.

‘ಮನೆ ದೇವರು ಯಾವುದು ಸ್ವಾಮಿ?’

‘ವೀರಭದ್ರೇಶ್ವರ’

‘ಹೂಂ. ರಾಯಚೋಟಿ ವೀರಭದ್ರೇಶ್ವರನ ಕೃಪೆ ನಿಮ್ಮ ಕುಟುಂಬದ ಮೇಲಿದೆ ತಾಯಿ. ಅಂದ ಹಾಗೆ ನೀವು ಒಂದು ಸಲ ರಾಯಚೋಟಿ ವೀರಭದ್ರೇಶ್ವರನ ಹತ್ತಿರ ಹೋಗಿ ಬರಬೇಕು. ಮನೆದೇವರನ್ನು ಮರೀಬಾರದು ತಾಯಿ. ನಿಮಗೆ ಹೋಗಲು ದೂರಾಗುತ್ತದೆ, ನನಗೆ ತಿಳಿಯುತ್ತದೆ ತಾಯಿ. ಅಂದ ಹಾಗೆ ಮುಂದಿನ ವಾರ ನಿಮ್ಮ ಊರಿನವರೊಬ್ಬರು ರಾಯಚೋಟಿ ಈರಣ್ಣನಿಗೆ ಹಣ್ಣುಕಾಯಿ ಮಾಡಿಸಲು ಐವತ್ತೊಂದು ರೂಪಾಯಿ ನನಗೆ ಕೊಟ್ಟಿದ್ದಾರೆ ತಾಯಿ. ನಿಮ್ಮದೂ ಸೇವಾ ಮಾಡಿಸುವದಿದ್ದರೆ ತಾಯಿ, ನಿಮ್ಮ ಇಷ್ಟ ಅವ್ವ, ನನ್ನ ಒತ್ತಾಯ ಇಲ್ಲ, ನೀವು ಐವತ್ತೊಂದು ಅಥವಾ ನೂರಾ ಒಂದುರೂಪಾಯಿ ಕೊಟ್ಟರೆ ಭಕ್ತಿಯಿಂದ ಬೆಳಿಗ್ಗೆ ಪೂಜೆಗೆ ನಿಮ್ಮ ಹೆಸರು ಬರೆಸುವೆ ತಾಯಿ, ಆ ಸ್ವಾಮಿಗಳು ನನಗೆ ಗೊತ್ತು ತಾಯಿ. ನಾನೇ ಖುದ್ದು ನಿಂತು ಪೂಜೆ ಮಾಡಿಸುವೆ ತಾಯಿ.’ ಗಿರಿಯಪ್ಪ ಇನ್ನೂ ಹೇಳುತ್ತಿರುವಂತೆಯೆ ತಾಯಿ ಒಳಗೆ ಹೋಗಿ ನೂರರ ಒಂದು ನೋಟು ಹಾಗೂ ಒಂದು ರೂಪಾಯಿ ನಾಣ್ಯವನ್ನು ತಂದು ಅವನ ಮುಂದಿಟ್ಟು ಕೈ ಮುಗಿದಳು.

(ಸಶೇಷ)